ವ್ಯವಹಾರದಲ್ಲಿ ತೊಡಗಿದ್ದು, ಹಾಗೂ ಕಾಮಗಾರಿ ಕೆಲಸಗಳಲ್ಲಿ ಕೆಲವು ನ್ಯೂನತೆಗಳಿದ್ದು, ಇವುಗಳನ್ನು ಸರಿಪಡಿಸಿಕೊಳ್ಳಲು ತಿಳಿಸಲಾಗಿದೆ. ನ್ಯೂನತೆಗಳನ್ನು ಸರಿಪಡಿಸುವ ಕಾಮಗಾರಿ ವಿಳಂಬವಾಗಿರುತ್ತದೆ.

ಈ) ಎ.ಪಿ.ಡಿ.ಪಿ. ಕಾಮಗಾರಿ ಕೆಲಸವನ್ನು ಮಾರ್ಚ್ 2003ರ ಅಂತ್ಯದೊಳಗೆ ಪೂರ್ಣಗೊಳಿಸಲು ಸೂಚಿಸಲಾಗಿದೆ.

ಬೆಂಗಳೂರು ಮತ್ತು ಮೈಸೂರು ರೈಲು ಮಾರ್ಗವನ್ನು ಜೋಡಿ ಮಾರ್ಗವನ್ನಾಗಿ ಪರಿವರ್ತನೆ

1307 (1981) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಂಗಳೂರು ಮತ್ತು ಮೈಸೂರು ಮದ್ಯದ ರೈಲು ಮಾರ್ಗವನ್ನು ಜೋಡಿ ಮಾರ್ಗವಾಗಿ, ಪರಿವರ್ತಿಸುವ ಕಾರ್ಯ ಕೈಗೊಳ್ಳಲಾಗಿದೆಯೇ;

ಆ) ಹಾಗಿದ್ದಲ್ಲಿ, ಕಾರ್ಯ ಯಾವ ಹಂತದಲ್ಲಿದೆ;

ಇ) ಜೋಡಿ ಮಾರ್ಗವಾಗಿ ಪರಿವರ್ತಿಸುವ ಕಾರ್ಯವನ್ನು, ವೇಗವಾಗಿ ಪೂರ್ಣಗೊಳಿಸಲು ಸರ್ಕಾರವು ಏನಾದರೂ ವಿಶೇಷ ಕ್ರಮ ರೂಪಿಸಿದ್ದಲ್ಲಿ, ಅದರ ವಿವರಗಳೇನು;

ಈ) ಯೋಜನೆ ಯಾವಾಗ ಪೂರ್ಣಗೊಳ್ಳುವ ನಿರೀಕ್ಷೆ ಇದೆ?

ಶ್ರೀ ಟಿ. ಜಾನ್ (ಮೂಲಸೌಲಭ್ಯ ಅಭಿವೃದ್ಧಿ ಹಾಗೂ ನಾಗರೀಕ ವಿಮಾನಯಾನ ರಾಜ್ಯ ಸಚಿವರು) :

ಅ) ಬೆಂಗಳೂರು ಮೈಸೂರಿನ ರೈಲ್ವೆ ಮಾರ್ಗವನ್ನು ದ್ವಿಮಾರ್ಗವಾಗಿಸುವ ಕಾಮಗಾರಿಯನ್ನು 2002 03 ನೇ ವರ್ಷದಲ್ಲಿ ಕೈಗೆತ್ತಿಕೊಳ್ಳಲಾಗಿದೆ. ಸಣ್ಣ ಸೇತುವೆಗಳ ಬೃಹತ್ ಸೇತುವೆಗಳ ನಿರ್ಮಾಣ ಮತ್ತು ಬೆಂಗಳೂರು ಹೆಜ್ಜಾಲ ವಿಭಾಗದ ಮಾರ್ಗದಲ್ಲಿ ಭೂ ಅಗೆತ ಕೆಲಸವನ್ನು ಪ್ರಾರಂಬಿಸಲಾಗಿದೆ. ಈ ಕಾಮಗಾರಿಗಳ ಪ್ರಗತಿದಾಯಕವು ಉತ್ತಮವಾಗಿದೆ. ಹೆಜ್ಜಾಲ ಮತ್ತು ರಾಮನಗರಂ ನಡುವಿನ ಕಾಮಗಾರಿಗೆ ಟೆಂಡರನ್ನು ಇಷ್ಟರೊಳಗೆ ಕರೆಯಲಾಗುವುದು.

ಇ) ಕಾಮಗಾರಿಯ ದೈನಂದಿನ ಪ್ರಗತಿಯ ಬಗ್ಗೆ ಉಸ್ತುವಾಗಿ ಮಾಡಲು ರೈಲ್ವೆಯು ಉಪ ಮುಖ್ಯ ಇಂಜಿನಿಯರ್ ರೊಬ್ಬರನ್ನು ಮತ್ತು ಇಬ್ಬರು ಕಾರ್ಯಪಾಲಕ ಇಂಜಿನಿಯರ್‌ರವರನ್ನು ನಿಯೋಜಿಸಿರುತ್ತದೆ. ಈ ಯೋಜನೆಯು ಸೇರಿದಂತೆ ವೆಚ್ಚ ಪಾಲುದಾರಿಕೆಗಾಗಿ 2002 03 ನೇ ಸಾಲಿಗೆ ರಾಜ್ಯ ಸರ್ಕಾರವು ರೂ. 4.00 ಕೋಟಿಗಳನ್ನು ಬಿಡುಗಡೆ ಮಾಡಿದೆ.

ಈ) ಬೆಂಗಳೂರು ರಾಮನಗರಂ ವಿಭಾಗವನ್ನು ದ್ವಿಮಾರ್ಗವಾಗಿಸುವ ಗುರಿ ಸಾಧನೆಯು 31.12.2004 ರ ಹೊತ್ತಿಗೆ ಪೂರ್ಣಗೊಳ್ಳಲಿದೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ನೂತನ ಡಿಪೋಗಳನ್ನು ಮಂಡ್ಯ ಜಿಲ್ಲೆಯಲ್ಲಿ ಪ್ರಾರಂಭಿಸುವುದು

1308 (1982) ಶ್ರೀ ಎಂ.ಎಸ್. ಆತ್ಮಾನಂದ (ಮಂಡ್ಯ) : ಮಾನ್ಯ ಸಾರಿಗೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಂಡ್ಯ ಜಿಲ್ಲೆಯಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಡಿಪೋಗಳನ್ನು ಪ್ರಾರಂಬಿಸಬೇಕಾದ ಅವಶ್ಯಕತೆಯನ್ನು ಸರ್ಕಾರ ಮನಗಂಡಿದೆಯೇ;